ಮುಖ್ಯಸ್ಥರು ಮತ್ತು ಇಲಾಖಾ ಮಂತ್ರಿಗಳಿಗೆ ಯಾವುದೇ ಇಲಾಖೆಯ ವ್ಯವಹಾರ ಆದರೂ ತಿಳಿಸಬೇಕು. ಇದೊಂದೇ ಎಂದು ಅಲ್ಲ. ಎಲ್ಲಿಯವರೆಗೆ ನಾವು ಅನ್ಯಾಯದ ವಿರುದ್ಧ ಹೋರಾಡತಕ್ಕಂತಹ ಶಕ್ತಿ ಪಡೆಯುವುದಿಲ್ಲವೋ ಅಲ್ಲಿಯವರೆಗೆ ಈ ರಾಜ್ಯದಲ್ಲಿ ಸರಿಯಾದ ವ್ಯವಸ್ಥೆ ಆಗುವುದಿಲ್ಲ. ಎಲ್ಲೆಲ್ಲಿ ಏನೇನು ನಡೆದಿದೆ ಎಂದು ತಾವು ದಯವಿಟ್ಟು ಕೊಡಿ. ಇಲ್ಲವೇ ನೀವೂ ಬನ್ನಿ ನಮ್ಮ ಅಧಿಕಾರಿಗಳನ್ನು ನಿಮ್ಮ ಜೊತೆ ಕಳಿಸುತ್ತೇನೆ ಇದನ್ನು ಪರಿಹಾರ ಮಾಡಲೇಬೇಕು ತಕ್ಕಶಿಕ್ಷೆ ಕೊಡಬೇಕಾಗುತ್ತದೆ ತಾವು ಇದರ ಬಗ್ಗೆ ನೆರವು ಕೊಡಬೇಕು.

ವಿಷಯ:- ಸಸಿ ನೆಡುವ ಬಗ್ಗೆ ಸರ್ಕಾರದ ನೀತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 132 (1161)

ಶ್ರೀ ಕೆ.ವಿಶ್ವೇಶ್ವರ ಹೆಗಡೆ (ಅಂಕೋಲ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ.

ಆ) 1996-97ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಸಸಿ ನೆಡಲಾಗುವುದು (ವಿಭಾಗವಾರು ವಿವರ ನೀಡುವುದು)

ಇ) 1995-96, 1996-97ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ವಿಭಾಗದಲ್ಲಿ ಯಾವ ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ.

ಈ) ಸಸಿ ನೆಡಲು ಸರ್ಕಾರದ ನೀತಿ ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ವಿವಿಧ ಅರಣ್ಯ ವಿಭಾಗಗಳಲ್ಲಿ ನೆಟ್ಟಿರುವ ಸಸಿಗಳ ವಿವರಗಳು ಈ ಕೆಳಕಂಡಂತಿವೆ.

1. ಹಳಿಯಾಲ ವಿಭಾಗ	20.462	ಲಕ್ಷ ಸಸಿಗಳು
2. ಯಲ್ಲಾಪುರ ವಿಭಾಗ	9.064	ಲಕ್ಷ ಸಸಿಗಳು
3. ಕಾರವಾರ ವಿಭಾಗ	15.173	ಲಕ್ಷ ಸಸಿಗಳು
4. ಹೊನ್ನಾವರ ವಿಭಾಗ	14.100	ಲಕ್ಷ ಸಸಿಗಳು
5. ಸಿರ್ಸಿ ವಿಭಾಗ	21.990	ಲಕ್ಷ ಸಸಿಗಳು
6. ಸಾಮಾಜಿಕ ಅರಣ್ಯ ವಿಭಾಗ	12.337	ಲಕ್ಷ ಸಸಿಗಳು

ಆ) 1996-97ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆಲು ಉದ್ದೇಶಿಸಿರುವ ಸಸಿಗಳ ವಿವರವು ಈ ಕೆಳಕಂಡಂತಿದೆ.

1. ಸಾಮಾಜಿಕ ಅರಣ್ಯ ವಿಭಾಗ	9.750	ಲಕ್ಷ ಸಸಿಗಳು
2. ಹಳಿಯಾಲ ವಿಭಾಗ	13.600	ಲಕ್ಷ ಸಸಿಗಳು
3. ಯಲ್ಲಾಪುರ ವಿಭಾಗ	8.450	ಲಕ್ಷ ಸಸಿಗಳು
4. ಕಾರವಾರ ವಿಭಾಗ	11.935	ಲಕ್ಷ ಸಸಿಗಳು
5. ಹೊನ್ನಾವರ ವಿಭಾಗ	17.061	ಲಕ್ಷ ಸಸಿಗಳು
6. ಸಿಸಿ ವಿಭಾಗ	16.656	ಲಕ್ಷ ಸಸಿಗಳು

ಇ) 1995-96ನೇ ಮತ್ತು 1996-97ನೇ ಸಾಲಿನಲ್ಲಿ ಇಲಾಖಾ ವೃಕ್ಷ ನೆಡುತೋಪುಗಳನ್ನು ಬೆಳೆಸಲು ನಾಟಿ ಮಾಡಲಾಗಿರುವ : ನಾಟಿ ಮಾಡಲಿರುವ ಸಸಿಗಳು ಒಂದೇ ಜಾತಿಯದಾಗಿರುತ್ತದೆ. ಇದಲ್ಲದೆ ಎಲ್ಲಾ ಜಾತಿಯ ಸಸಿಗಳನ್ನು ಎಲ್ಲಾ ವಿಭಾಗಗಳ ಸಸ್ಯಕ್ಷೇತ್ರಗಳಲ್ಲಿ ಬೆಳೆಸಿ ನಾಟಿ ಮಾಡಲಾಗಿರುವುದು. ಇಲಾಖಾ ವೃಕ್ಷ ನೆಡುತೋಪುಗಳಲ್ಲಿ ಈ ಕೆಳಕಂಡ ಜಾತಿಯ ಸಸಿಗಳನ್ನು ನಾಟಿ ಮಾಡಲಾಗಿದೆ.

1. ಸಾಗುವಾನಿ.
2. ಮತ್ತಿ.
3. ನಂದಿ.
4. ಕಿಂದಾಳ.
5. ಆಕೇಶಿಯಾ.
6. ಬಂಬೂ.
7. ಸಿಸು
8. ನೆಲ್ಲಿ.
9. ಹೊನ್ನೆ.
10. ಕೆಸೂರಿನಾ.
11. ನೇರಲೆ.
12. ಅಂಟುವಾಳ

13. ಬೆತ್ತ.

14. ಮುರುಗೆಲಾ

15. ವಾಟೆ.

16. ಶ್ರೀಗಂಧ

17. ದಾಲ್ಚಿನ್ನಿ

18. ಹೊಳೆಮತ್ತಿ

19. ಉಪ್ಪಗೆ

20. ಗೇರು

21. ಮುತ್ತಗ

22. ಮಾವು

23. ಹಲಸು

24. ಜಾಲಿ

25. ತಾರಿ

26. ಹೊಂಗೆ.

ಇತ್ಯಾದಿ.

ಈ) ರಾಜ್ಯದಲ್ಲಿರುವ ಅರಣ್ಯಗಳ ಮಟ್ಟವನ್ನು ರಾಷ್ಟ್ರೀಯ ಅರಣ್ಯ ನೀತಿಯ ಮಟ್ಟವಾದ ಭೂ ಪ್ರದೇಶದ ಶೇ. 133 1/3 ತರುವುದು. ಇದಕ್ಕೋಸ್ಕರ ಕ್ಷೀಣಿತ ಅರಣ್ಯ ಪ್ರದೇಶಗಳ ಪುನಶ್ಚೇತನಕ್ಕೆ ಪ್ರಾಥಮಿಕ ಪ್ರಾತಿನಿಧ್ಯತೆ ನೀಡಲಾಗುತ್ತದೆ. ಎರಡನೆಯದಾಗಿ ಸರ್ಕಾರಿ ಪಾಳು ಭೂಮಿ ಹಾಗೂ ಸಮುದಾಯ ಭೂಮಿಗಳಲ್ಲಿ ವೃಕ್ಷ ನೆಡುತೋಪುಗಳನ್ನು ಬೆಳಸಲಾಗುತ್ತಿದೆ. ನಂತರ ರಸ್ತೆ ಬದಿ, ರೈಲ್ವೆ ಹಳಿಗಳ ಬದಿಯಲ್ಲಿ ಶಾಲಾ ಕಾಲೇಜುಗಳ ಆವರಣದಲ್ಲಿ ಕೆರೆ ಅಂಗಳ ಇತ್ಯಾಧಿ ಪ್ರದೇಶಗಳಲ್ಲಿ ಸಸಿಗಳನ್ನು ನಾಟಿ ಮಾಡಲಾಗುತ್ತಿದೆ. ಇದಲ್ಲದೆ ಕೃಷಿ ಅರಣ್ಯ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕರಿಗೆ ಹಾಗೂ ಸಂಘ ಸಂಸ್ಥೆಗಳಿಗೆ ಸಹಾಯಕ ದ್ರವ್ಯಪೋಷಿತ ದರಗಳಲ್ಲಿ ಸಸಿಗಳನ್ನು ವಿತರಣೆ ಮಾಡುವುದು. ಪರಿಹಾರಾತ್ಮಕ ನೆಡುತೋಪುಗಳನ್ನು ಬೆಳೆಸುವುದು. ಖಾಸಗೀ ಜಮೀನುಗಳಲ್ಲಿ ಬೆಳೆಸಿ ಬದುಕಿ ಉಳಿದ ಫಲೋತ್ಪನ್ನಗಳನ್ನು ನೀಡುವ ಜಾತಿಯ ಸಸಿಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಪರಿಸರ ಸಮತೋಲನವನ್ನು ಕಾಪಾಡುವುದು, ವೃಕ್ಷ ನೆಡುತೋಪುಗಳನ್ನು ಬೆಳೆಸುವಾಗ ಗ್ರಾಮೀಣ ಸಮುದಾಯದ

ಸಹ ಭಾಗಿತ್ವವನ್ನು ಪಡೆಯುವುದು. ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ, ಅವುಗಳ ಸಹ ಭಾಗಿತ್ವದಲ್ಲಿ ಸಸಿಗಳನ್ನು ನೆಟ್ಟು, ಸಂರಕ್ಷಿಸಿ, ಅರಣ್ಯಗಳನ್ನು ವೃದ್ಧಿಪಡಿಸುವುದು.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ಈ ವಿಷಯ ಕುರಿತಂತೆ ಪ್ರಸ್ತಾಪವಾಗಿತ್ತು. ಪ್ರತಿವರ್ಷ ಕೋಟ್ಯಾಂತರ ಸಸಿಗಳನ್ನು ನೆಡುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡ 60ರಷ್ಟು ಅರಣ್ಯ ಪ್ರದೇಶವಾದಂತಹ ಜಿಲ್ಲೆಯಾಗಿದೆ. ಹಾಗಾಗಿ ನೆಟ್ಟಲ್ಲೇ ಸಸಿಗಳನ್ನು ಮತ್ತೆ ನೆಡುತ್ತಿದ್ದಾರೆಂಬ ಅನುಮಾನ ಬಂದಿದೆ. ಇದಕ್ಕೇನಾದರೂ ವಿಶೇಷ ತನಿಖಾ ಸಮಿತಿಯನ್ನು ಸರಕಾರ ನೇಮಕ ಮಾಡುತ್ತದೆಯೇ ಎಂದು ತಿಳಿಸಬೇಕು. ಅರಣ್ಯ ಪ್ರದೇಶದಲ್ಲಿ ಶೇಕಡ 80ರಷ್ಟು ಅರಣ್ಯ ಜಿಲ್ಲೆ ಇರುವುದರಿಂದ, ಅರಣ್ಯ ಪ್ರದೇಶದಲ್ಲಿ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಸಸಿಗಳನ್ನು ನೆಟ್ಟಿದ್ದಾರೆ. ಈಗ ರೈತರ ಬೆಟ್ಟದ ಜಾಗಗಳಲ್ಲಿ ಸಸಿಗಳನ್ನು ನೆಡುವ ಅಗತ್ಯತೆ ಇದೆ. ರೈತರಿಗೆ ಬೆಟ್ಟದ ಜಾಗದಲ್ಲಿ ಅರಣ್ಯ ಇಲಾಖೆಯಿಂದ ಸಸಿ ನೆಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಎಲ್ಲಿ ಸಸಿಗಳನ್ನು ನೆಡುವ ಅವಶ್ಯಕತೆ ಇದೆ ಅಥವಾ ಅಲ್ಲಿ ಸಸಿಗಳು ನೆಟ್ಟಿದ್ದು ಇದೆಯೋ ಇಲ್ಲವೋ ಎನ್ನುವ ಸಂಕೋಚವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಹಾಗೇನೂ ಇಲ್ಲ. ನಮ್ಮಲ್ಲಿ ರಾಷ್ಟ್ರೀಯ ನೀತಿ ಪ್ರಕಾರ ಯಾವ ರೀತಿ ಅರಣ್ಯ ಇರಬೇಕು ಎಂದರೆ, ಭೂಗರ್ಭದಿಂದ 33 ಪರ್ಸೆಂಟ್ ಇರಬೇಕಾಗುತ್ತದೆ. ಈಗ ನಮ್ಮಲ್ಲಿ 20 ಪರ್ಸೆಂಟ್ ಇದೆ. 28 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 80 ಪರ್ಸೆಂಟ್ ಜಮೀನು ನಿಮ್ಮ ಜಿಲ್ಲೆಯಲ್ಲೇ ಇದೆ. ಆ 80 ಪರ್ಸೆಂಟಿನಿಂದ 60ಕ್ಕೆ ಇಳಿದಿದೆ ನಿಜ. ಯಾವ ಪ್ರದೇಶದಲ್ಲಿ ಹಾಳಾಗಿದೆ, ಕ್ಷೀಣಿಸುತ್ತಿದೆ ಅಂತಹ ಪ್ರದೇಶಗಳಲ್ಲಿ ನಾವು ಗಿಡಗಳನ್ನು ನೆಡುತ್ತಿದ್ದೇವೆ. ಅದರಲ್ಲಿ ತೊಂದರೆ ಏನೂ ಇಲ್ಲ. ಹೊಸದಾಗಿ ಬೇರೆ ವ್ಯವಸ್ಥೆ ಮಾಡಿ ಎಂದು ತಾವು ಹೇಳಿದ್ದೀರಿ. ಬೇರೆ ಜಮೀನಿನಲ್ಲೂ ಹಾಕುವ ಬಗ್ಗೆ ಮಾಡುತ್ತಿದ್ದೇವೆ. ಸಾಮೂಹಿಕ ಜಮೀನಿನಲ್ಲಿ ಮತ್ತು ನಾವು ಯಾವ್ಯಾವ ಜಮೀನಿನಲ್ಲಿ ಮಾಡುತ್ತಿದ್ದೇವೆಂದು ಉತ್ತರದಲ್ಲಿ ಎಲ್ಲ ಹೇಳಿದ್ದೇನೆ. ಆ ಜಮೀನಿನಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಕೆರೆಗಳ ಹತ್ತಿರದಲ್ಲಿ ಇಂತಹ ಕಡೆಗಳಲ್ಲಿ ಮಾಡಬೇಕಾಗುತ್ತದೆ, ಮಾಡುತ್ತೇವೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ಪ್ರಶ್ನೋತ್ತರ ಇರುವುದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. ಅಲ್ಲಿ ಸಾಕಷ್ಟು ಗೊಂದಲ ಅವ್ಯವಸ್ಥೆ ಇದೆ ಎಂದು ಜನ ಪ್ರತಿನಿಧಿಗಳಿಗೆ ಎಲ್ಲಾ ಹಂತದಲ್ಲೂ ಎನ್ನಿಸುತ್ತಿದೆ. ಅದು ಜಿಲ್ಲಾ ಪಂಚಾಯತಿ ಇರಬಹುದು ತಾಲ್ಲೂಕು ಪಂಚಾಯತಿ ಇರಬಹುದು ಎಲ್ಲಾ ಹಂತದಲ್ಲೂ ಅನ್ನಿಸುತ್ತಿದೆ. ನೆಟ್ಟಲ್ಲೇ ನೆಡುತ್ತಿದ್ದಾರೆಂದು ಎಲ್ಲರ ಅನುಮಾನ ಇದೆ. ಒಂದು ತನಿಖಾ ಸಮಿತಿ ಮಾಡಲಿ.

ಅಧ್ಯಕ್ಷರು:- ತನಿಖಾ ಸಮಿತಿ ಏರ್ಪಾಡು ಮಾಡಿ ಎನ್ನುವ ಬದಲು ಎಲ್ಲೆಲ್ಲಿ ಹಾಗೆ ಆಗಿರಬಹುದೆಂದು ಖಚಿತವಾಗಿ ನೀವೊಂದು ದೂರನ್ನು ಅವರಿಗೆ ಕೊಡಿ ಇಲ್ಲವಾದಲ್ಲಿ ನನಗೆ ಕೊಡಿ ನಾನು ಹೇಳುತ್ತೇನೆ. ಮತ್ತೆ ಇನ್ನೊಂದು ಸಲ ಅದಕ್ಕೆ ಉತ್ತರ ನಾನು

ಕೇಳುತ್ತೇನೆ. ನಿರ್ದಿಷ್ಟ ಪ್ರಕರಣಗಳು ಇದ್ದಲ್ಲಿ ನನ್ನ ಗಮನಕ್ಕೆ ತನ್ನಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಸದಸ್ಯರು ನಿರ್ದಿಷ್ಟವಾದ ಪ್ರಕರಣಗಳು ಇದ್ದಲ್ಲಿ ಕೊಡಲಿ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ನಿರ್ದಿಷ್ಟವಾಗಿ ಎಂದರೆ 1-2 ಪ್ರಕರಣಗಳನ್ನು ಕೊಡಬಹುದು. ನಮ್ಮಲ್ಲಿ ಶೇಕಡ 80ರಷ್ಟು ಅರಣ್ಯ ಜಿಲ್ಲೆ ಇದೆ. ಅದರೊಳಗೆ ವರ್ಷಕ್ಕೆ ಕೊಟ್ಯಾಂತರ ಸಸಿ ನೆಡುತ್ತಾರೆ. ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು:- ಎಲ್ಲಾದರೂ ನೆಡಲಿ ಭೂಮಿಯಲ್ಲಿ ನೆಟ್ಟರೆ ಪರವಾಗಿಲ್ಲ ನಮ್ಮ ಕೋಲಾರದಂತಹ ಜಿಲ್ಲೆಯಲ್ಲಿ ಪೇಪರ್ ಮೇಲೆ ನೆಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಪೇಪರಿನಲ್ಲಿ ನೆಡುವಂತಹ ಪರಿಸ್ಥಿತಿ ಮಾಡುವುದಿಲ್ಲ. ನಾನು ಬಂದ ಮೇಲೆ ಒಳ್ಳೆಯ ರೀತಿಯಿಂದ ಮಾಡಿದ್ದೇನೆ. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಗಿಡ ನೆಡುವ ಪ್ರಶ್ನೆಯೇ ಇಲ್ಲ. ಇವರು ಬಂದ ಮೇಲೆ ಮಳೆಯೇ ಇಲ್ಲ ಗಿಡ ನೆಡುವ ಪ್ರಶ್ನೆ ಎಲ್ಲಿ ಬರುತ್ತದೆ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ರೈತರ ಬೆಟ್ಟಗಳಲ್ಲಿ ಅರಣ್ಯ ಇಲಾಖೆ ಸಸಿ ನೆಡಲಿ.

ಶ್ರೀ ಚಂದ್ರಕಾಂತ ಬೆಲ್ಲದ್:- ಮರಗಳ ಬೆಳವಣಿಗೆ ಅತಿಯಾಗಿ ಮಳೆ ಬರುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಮಳೆ ಬರುವ ದೃಷ್ಟಿಯಿಂದಲೇ ಗಿಡ ನೆಡುವುದು.

ಶ್ರೀ ಕೆ.ವಿಶ್ವೇಶ್ವರ ಹೆಗಡೆ:- ರೈತರ ಬೆಟ್ಟದಲ್ಲಿ ಅರಣ್ಯ ಇಲಾಖೆ ಸಸಿ ನೆಡೆಸುವುದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾಡುತ್ತಿದ್ದೇವೆ, ಅದರ ಬಗ್ಗೆ ಕಾರ್ಯ ಕ್ರಮ ಹಾಕಿಕೊಳ್ಳುತ್ತೇವೆಂದು ನಿಮಗೆ ಆಗಲೇ ಹೇಳಿದ್ದೇನೆ. ಪರಿಸರ ಚೆನ್ನಾಗಿ ಆಗಬೇಕೆಂದು ನಮ್ಮ ಉದ್ದೇಶ ಇದೆ.

ಡಾ|| ಎಂ.ಪಿ.ಕರ್ಕಿ:- ಲಕ್ಷಗಟ್ಟಲೆ ಸಸಿಗಳನ್ನು ನೆಡುತ್ತಿದ್ದಾರೆ. ಇದರಲ್ಲಿ ಪ್ರತಿವರ್ಷ ಪ್ರತಿ ಶತ ಎಷ್ಟು ಸಸಿಗಳು 5 ವರ್ಷಗಳ ತನಕ ಇರುತ್ತವೆ ಎನ್ನುವುದು ಒಂದು ಪ್ರಶ್ನೆ. ಈಗ ಸಾರ್ವಜನಿಕರು, ಶಾಲೆಗಳಲ್ಲಿ ಸಸಿ ನೆಡಲಿಕ್ಕೆ ಅನುಕೂಲತೆ ಮಾಡಿಕೊಡುತ್ತಿದ್ದೀರಿ ಟ್ರೀಗಾರ್ಡ್ ಕೊಡುವುದನ್ನು ನಿಲ್ಲಿಸಿದ್ದೀರೋ? ತಾವು ಯಾವ್ಯಾವ ಸಸಿಗಳನ್ನು ನೆಡುತ್ತಿದ್ದೀರಿ ಎಂದು ಹೇಳಿ ಅದನ್ನು ಶೇಕಡಾವಾರು ಕೊಡಲಿಕ್ಕೆ ಸಾಧ್ಯ ಇದೆಯೇ? ಗೇರು ಗಿಡಗಳನ್ನು ನೆಡುತ್ತೇವೆಂದು ಹೇಳಿದ್ದೀರಿ. ಗೇರು ಪ್ಲಾಂಟೇಷನ್ ಹೊರತುಪಡಿಸಿ ಬಾಕಿ ಎಲ್ಲಾದರೂ ಗೇರು ಗಿಡಗಳನ್ನು ನೆಡುತ್ತಿದ್ದೀರೋ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಾನು ಉತ್ತರ ಕೊಡುತ್ತೇನೆ, ಈಗ ಸಸಿಗಳನ್ನು ನೆಡುತ್ತಿರುವುದು ನಿಜ. ತಮಗೆ ಖಚಿತವಾದ ಉತ್ತರ ಬೇಕೆಂದರೆ ಇನ್ನೊಂದು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. ಯಾವ್ಯಾವ ಸಸಿಗಳನ್ನು ನೆಡುತ್ತಿದ್ದೀರಿ ಎಂಬ ಬಗ್ಗೆ ಪ್ರತ್ಯೇಕವಾಗಿ ಕೇಳಿ.

ಡಾ॥ ಎಂ.ಪಿ.ಕರ್ಕಿ:- ಟ್ರಿ ಗಾರ್ಡ್ ಕೊಡುವುದನ್ನು ನಿಲ್ಲಿಸಿದ್ದಾರೆ. ಅದನ್ನು ಕೊಡುತ್ತಾರೋ ಹೇಗೆ ಎಂದು ವಿವರ ಬೇಕು. ಈ ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಅನೇಕ ಸಸಿಗಳು ಇವೆ. ನಮ್ಮಲ್ಲಿ ಹಾಕತಕ್ಕಂಥಾದ್ದು ಅಕೇಶಿಯಾ ಮಾತ್ರ. ಒಳ್ಳೆ ಜಮೀನಿನಲ್ಲೂ ಕೂಡ ಅಕೇಶಿಯಾ ಹಾಕುತ್ತಾರೆ. ಅದಕ್ಕಾಗಿಯೇ ಎಷ್ಟು ಪರ್ಸಂಟೇಜ್ ಯಾವ್ಯಾವುದನ್ನು ಹಾಕುತ್ತಿದ್ದೀರಿ ಎಂದು ಕೇಳಿದ್ದುದು. 99 ಪರ್ಸೆಂಟ್ ಅಕೇಶಿಯಾ 1 ಅಥವಾ 2 ಪರ್ಸೆಂಟ್ ಕ್ಯಾಸರಿನ. ಅದನ್ನು ಬಿಟ್ಟರೆ ಬೇರೆ ಯಾವ ಸಸಿಗಳನ್ನೂ ನೆಡುತ್ತಿಲ್ಲ. ಅಲ್ಲಿಂದ ಇಲ್ಲಿತನಕ ಅಕೇಶಿಯಾನೇ. ಇಲ್ಲಿ ಇಷ್ಟೆಲ್ಲಾ ತೇಗ, ಮತ್ತಿ, ನಂದಿ, ಕಿನ್ನಾಳ, ಬೊಂಬು ಎಂದು ಬರೆದುಬಿಟ್ಟಿದ್ದಾರೆ. ಅದಕ್ಕೆ ನಾನು ತಮ್ಮಲ್ಲಿ ಕೇಳುತ್ತಿರುವುದು. ಪರ್ಸಂಟೇಜ್ ಯಾವ ರೀತಿ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತಿರುವುದು. ಜನರಿಗೆ ಉಪಯೋಗವಾಗತಕ್ಕಂತಹ ಸಸಿಗಳು ಇವೆ ಅದನ್ನು ನೆಡುತ್ತೀರೋ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಕೇಶಿಯಾ ನೀಲಗಿರಿ ಸಸಿಗಳನ್ನು ಏಕೆ ಹೆಚ್ಚು ಹಾಕುತ್ತಿದ್ದೇವೆಂದರೆ ಉರುವಲು ಕಟ್ಟಿಗೆಯಿಂದಾಗಿ ಅರಣ್ಯದ ಮೇಲೆ ಹೆಚ್ಚು ಒತ್ತಡ ಬರುತ್ತಿದೆ. ಜನರಿಗೆ ಅನುಕೂಲವಾಗಲೀ ಎಂದು ಇದನ್ನು ನೆಡುತ್ತಿದ್ದೇವೆ.

ಅಧ್ಯಕ್ಷರು:- ಅದು ಕನ್ವಿನ್ಸಿಂಗ್ ಉತ್ತರ ಅಲ್ಲ. ಬೇರೆ ಸ್ಪೀಷೀಸ್ ಹಾಕಬೇಕು. ಅಕೇಶಿಯಾ ಯೂಕಲಿಪ್ಟಸ್ ಬದಲಿಗೆ ಅವಶ್ಯಕತೆಯ ಕಡೆಗೆ ಗಮನ ಕೊಡಬೇಕು. ಜನ ಬಾಯಿ ಇಲ್ಲದವರು ನಿಮ್ಮ ಹತ್ತಿರ ಅವರೇನು ಬೇಡಿಕೆ ಮಾಡುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಹಣ್ಣು ಹಂಪಲು ಗಿಡಗಳನ್ನೂ ಹಾಕುವುದಕ್ಕೆ ನಾವು ತಯಾರಿದ್ದೇವೆ. ಅದನ್ನು ಮಾಡುತ್ತೇವೆ. ಬೇವು ಹುಣಸೇ ಇಂತಹವುಗಳನ್ನು ನೆಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ವಿಷಯ:- ವೈದ್ಯಕೀಯ ಶಿಕ್ಷಣದಲ್ಲಿರುವ ಕ್ಯಾಪಿಟೇಶನ್ ಶುಲ್ಕ ತಡೆಯಲು ಕ್ರಮ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 133 (1165)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ವೈದ್ಯಕೀಯ ಶಿಕ್ಷಣಕ್ಕೆ ಮಾರಕವಾಗುತ್ತಿರುವ ಕ್ಯಾಪಿಟೇಷನ್ ಪಿಡುಗನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇರುವ ತೊಂದರೆ ಏನು?

2) ವೈದ್ಯಕೀಯ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸಲು ಕ್ರಮ